ಪ್ರಥಮದರ್ಜೆ ಸಹಾಯಕ & ದ್ವಿತೀಯ ದರ್ಜೆ ಸಹಾಯಕ ಬಡ್ತಿ

65 : (232)

ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು)

ಅ) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಲ್ಲಿ ಸೆಪ್ಟೆಂಬರ್ 2012ರಲ್ಲಿ ಎಷ್ಟು ಜನ ದ್ವಿತೀಯ ದರ್ಜೆ ಸಹಾಯಕರಿಗೆ ಪ್ರಥಮ ದರ್ಜೆ ಸಹಾಯಕರಾಗಿ ಬಡ್ತಿ ನೀಡಲಾಗಿದೆ;

ಆ) ಈ ಪೈಕಿ ಪರಿಶಿಷ್ಟ ಜಾತಿಗೆ ಶೇಕಡ ಎಷ್ಟು ಮೀಸಲಾತಿ ನೀಡಲಾಗಿದೆ; (ವಿವರ ನೀಡುವುದು)

ಇ) ಬಡ್ತಿ ನೀಡಿದಾಗ ಕೌನ್ಸಿಲಿಂಗ್‌ಗೆ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳನ್ನು ಯಾವ ರೀತಿ ಪರಿಗಣಿಸಲಾಗುವುದು; (ವಿವರ ನೀಡುವುದು)

(ಈ) ಮೀಸಲಾತಿಯನ್ವಯ 7 ಜನ ಸಾಮಾನ್ಯ ಅಭ್ಯರ್ಥಿಗಳಾದ ನಂತರ ಒಬ್ಬರು ಪರಿಶಿಷ್ಟ ಜಾತಿಯವರಿಗೆ ಕೌನ್ಸಿಲಿಂಗ್‌ಗೆ ಪರಿಗಣಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಉ) ಹಾಗಿದ್ದಲ್ಲಿ, ಸರ್ಕಾರವು ಮುಂದಿನ ಕೌನ್ಸಿಲಿಂಗ್‌ನಲ್ಲಿ ಮೇಲ್ಕಂಡ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗುವುದೇ?

ಶ್ರೀ ಎಶ್ವೇಶ್ವರಯ್ಯ ಹೆಗಡೆ ಕಾಗೇರಿ
(ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)

ಅ) ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಸೆಪ್ಟೆಂಬರ್ 2012ರಲ್ಲಿ ಒಟ್ಟು 158 ದ್ವಿತೀಯ ದರ್ಜೆ ಸಹಾಯಕ / ಕ್ಲರ್ಕ್ ಕಮ್ ಟೈಪಿಸ್ಟ್‌ಗಳಿಗೆ ಪ್ರಥಮ ದರ್ಜೆ ಸಹಾಯಕರಾಗಿ ಪದೋನ್ನತಿ ನೀಡಲಾಗಿದೆ.

ಆ) ಸರ್ಕಾರಿ ಆದೇಶ ಸಂಖ್ಯೆ: ಡಿಪಿಆರ್ 28 ಎಸ್‌ಬಿಸಿ 1979; ದಿ:25.09.1979 ರನ್ವಯ ಪರಿಶಿಷ್ಟ ಜಾತಿಗೆ ಶೇಕಡಾ 15ರಷ್ಟು ಮೀಸಲಾತಿ ನೀಡಲಾಗಿದೆ.

ಇ) ಕೌನ್ಸಿಲಿಂಗ್‌ನಲ್ಲಿ ಸೇವಾ ಜೇಷ್ಠತೆಯನ್ನು ಅಳವಡಿಸಿಕೊಂಡು ಸ್ಥಳ ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗಿದೆ.

ಈ) ಇಲ್ಲ.

ಉ) ಪ್ರಶ್ನೆ ಉದ್ಭವಿಸುವುದಿಲ್ಲ.